

ಸಂಪಾದಕರು
**ಎನ್.ಎಸ್.ಎಸ್.ರಾವ್**



ಮುಖ್ಯ ಕಾರ್ಯ ನಿರ್ವಾಹಕ ಸಂಪಾದಕರು
**ಬಿ.ಆರ್.ಅವಿನಾಶ್‌ಬಾಬು**


## ಪತ್ರಿಕಾ ಬಳಗ

ಗೌರವ ಸಂಪಾದಕರು
**ಡಿಂ.ಬಿ.ವೇದಮೂರ್ತಿ, ಐಎಎಸ್**
ಗೌರವ ಸಲಹೆಗಾರರು
**ವೆಂಕಟನಾರಾಯಣ**
ಮುಖ್ಯ ಕಾರ್ಯನಿರ್ವಾಹಕ ಸಂಪಾದಕರು
**ಬಿ.ಆರ್.ಅವಿನಾಶ್‌ಬಾಬು**
ಸಂಪಾದಕರು
**ಎನ್.ಎಸ್.ಎಸ್.ರಾವ್**
ಹಿರಿಯ ಉಪ ಸಂಪಾದಕರು
**ಬಿ.ಆರ್.ರತ್ನಮಯ್ಯಶೆಟ್ಟಿ**
ಕಾನೂನು ಸಲಹೆಗಾರರು
**ಡಿಂ.ಬಿ.ಅಶ್ವಿನಿ,** ಬಿ.ಎ., ಎಲ್‌ಎಲ್‌ಬಿ
**ವರದಿಗಾರರು**
ವರದಿಗಾರರು
**ವೆಂಕಟಾಚಲ, ಶ್ರೀಕಾಂತ್,**
**ಎನ್.ಪಿ.ಮಂಜುನಾಥ್**
**ಬಿ.ಮೋಹನ್**
**ಕಾರ್ತಿಕ್**
ಪುಟ ವಿನ್ಯಾಸ
**ಡಿಂ.ರವಿಶಂಕರ್**

**ವೇದಮೂರ್ತಿ ಪತ್ರಿಕೆ**
ಮಾರುತಿ ನಿಲಯ, ನಂ.1655,
6ನೇ ಮುಖ್ಯರಸ್ತೆ, ಕೆಂಗೇರಿ ಉಪನಗರ,
ಬೆಂ–60 ದೂರವಾಣಿ: 080 28486622
ಮೊ:9480429897
98450 45055 / 9008794899
ಇ–ಮೇಲ್:
www. vedamurthypatrika@gmail.com
www. nssrao68@gmail.com
www. avinashbabu684@gmail.com


### ಸುಭಾಷಿತ

ಜೀವನ ಎನ್ನುವುದು ದೇವರು ಎಲ್ಲರಿಗೂ ಕೊಟ್ಟಿರುವ 'ವರ' ಅದನ್ನು ಅಲ್ಲಗಳೆಯಬೇಡಿ, ತಿರಸ್ಕರಿಸಬೇಡಿ. ಸಾಹಸದಿಂದ ಬಾಳಿ, ಸಂತೋಷದಿಂದ ಬಾಳಿ.

– ವಿವೇಕಾನಂದ

ಗ್ರಂಥಗಳು 'ಬಾಳನ್ನು ಬೆಳಗಿಸುವ ಸಂಜೀವಿನಿ.

– ಡಿ.ವಿ.ಜಿ.

# "ಧನ್ವಂತರಿ ಯಕ್ಷ ಶ್ರೇಷ್ಠ ಪ್ರಶಸ್ತಿ ಪ್ರದಾನ"



ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ರಂಗಸಮುದ್ರ, ಬೆಂಗಳೂರು ಇವರು ದಿನಾಂಕ: 19.02.2017 ಭಾನುವಾರದಂದು "ಕನ್ನಡ ಸೊಬಗು –ಯಕ್ಷಗಾನ ಬೆಡಗು" ಎಂಬ ಕಾರ್ಯಕ್ರಮವನ್ನು ಟಿ.ಎನ್ ಬಾಲಕೃಷ್ಣ ಬಯಲು ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದು, ಖ್ಯಾತ ಹೋಮಿಯೋಪಥಿ ತಜ್ಞರು, ಪ್ರಾಧ್ಯಾಪಕರು ಮತ್ತು ಯಕ್ಷಗಾನ ಕಲಾವಿದರೂ ಆದ ಡಾ॥ ಶ್ರೀಪಾದ ಹೆಗಡೆ ಹುಕ್ಲಮಕ್ಕಿ ಇವರಿಗೆ "ಧನ್ವಂತರಿ ಯಕ್ಷ ಶ್ರೇಷ್ಠ" ಮತ್ತು "ರಂಗಸಮುದ್ರ 2017" ರ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಕಾರ್ಯಕ್ರಮವನ್ನು ಚಂಡೆ ಬಾರಿಸುವುದರ ಮೂಲಕ ಹಿರಿಯ ಸಾಹಿತಿಗಳಾದ ಶ್ರೀ ಗೋ. ರು. ಚೆನ್ನಬಸಪ್ಪನವರು ಉದ್ಘಾಟಿಸಿದರು. ಡಾ. ಸಿದ್ಧಲಿಂಗಯ್ಯ, ಖ್ಯಾತ ಕವಿಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗೋಪಾಲಕೃಷ್ಣ ಹೆಗಡೆಯವರು ಯಕ್ಷಗಾನ ಕುರಿತು ವಿಚಾರ ಮಂಡಿಸಿದರು. ವೇದಿಕೆಯಲ್ಲಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಮಾಯಣ್ಣ, ಕನ್ನಡ ಸಾಹಿತ್ಯ ಪರಿಷತ್, ರಾಜರಾಜೇಶ್ವರಿನಗರದ ಅಧ್ಯಕ್ಷರು ಮತ್ತು ರಂಗಸಮುದ್ರದ ಗೌರವಾಧ್ಯಕ್ಷರು ಆದ ಶ್ರೀ ಹೋ.ಬೋ. ಪುಟ್ಟೇಗೌಡರು ಸ್ಥಳೀಯ ಬಿ.ಬಿ.ಎಂ.ಪಿ. ಸದಸ್ಯರು ಮತ್ತು ಸ್ಥಳೀಯ ಮುಖಂಡರುಗಳು ಹಾಗೂ ಕ.ಸಾ.ಪ. ಪದಾಧಿಕಾರಿಗಳು ಹಾಜರಿದ್ದರು. ನಂತರ ವಿಶೇಷ ಬಡಾಬಡಗಿನ ಯಕ್ಷಗಾನ "ವೀರಭದ್ರ ವಿಜಯ" ಆಟ ಆಡಿದರು. ವಿಶಿಷ್ಟವಾಗಿ ಡಾ. ಶ್ರೀಪಾದ ಹೆಗಡೆಯವರು ವೀರಭದ್ರನಾಗಿ 32 ಪಂಜುಗಳ ಉರಿಯುವ ಕಟ್ಟೆಯನ್ನು ಕಟ್ಟಿ ಕೈಯಲ್ಲಿ ಎರಡು ಪಂಜುಗಳನ್ನು ಹಿಡಿದು, ಬಯಲಿನಿಂದ ಬೊಬ್ಬಿರಿಯುತ್ತ, ಉಗ್ರನೂ, ವ್ಯಘ್ರನೂ ಆದ ಶಿವನಿರುವ ವೇದಿಕೆಗೆ ಬಂದು ಆರ್ಭಟಿಸುವ ದೃಶ್ಯ ಮೈರೋಮಾಂಚನಗೊಳಿಸುವಂತಿತ್ತು. ನಂತರದ ವೀರಭದ್ರನ ಅಟ್ಟಹಾಸ, ಯಜ್ಞಧ್ವಂಸ ಮಾಡುವುದು. ದಕ್ಷನ ತಲೆ ಕಡಿಯುವುದು ಮುಂತಾದ ದೃಶ್ಯಗಳನ್ನು ಮನೋಜ್ಞವಾಗಿ ಅಭಿನಯಿಸಿದರು. ಶ್ರೀ ಹೋ.ಬೋ. ಪುಟ್ಟೇಗೌಡರು ವಂದನಾರ್ಪಣೆ ಮಾಡುತ್ತಾ ಬೆಂಗಳೂರಿನ ಕಲಾರಸಿಕರಿಗೆ ವೀರಭದ್ರನ ಪಾತ್ರದ ವಿಶೇಷತೆಯನ್ನು ಯಕ್ಷಗಾನದವರೂ ಕಂಡು ಕೇಳರಿಯದ ಹಳೇ ಸಂಪ್ರದಾಯವನ್ನು ದಾಖಲಿಸಿದ್ದು ವಿಶೇಷವೆಂದು ತಿಳಿಸಿ ಎಲ್ಲರಿಗೂ ಧನ್ಯವಾದಗಳನ್ನು ಹೇಳಿದರು. ಸೇರಿದ ಪ್ರೇಕ್ಷಕರ ಮನದಲ್ಲಿ ಬಹುವರ್ಷಗಳ ಕಾಲ ನೆನಪಿನಲ್ಲಿರುವ ಕಾರ್ಯಕ್ರಮ ಇದಾಗಿದ್ದು ವಿಶೇಷ. ಶ್ರೀ ಗಣಪತಿ ಹೆಗಡೆಯವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

# ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುವುದರೊಂದಿಗೆ ಪ್ರಾಪಂಚಿಕ ಜ್ಞಾನ



ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುವುದರೊಂದಿಗೆ ಪ್ರಾಪಂಚಿಕ ಜ್ಞಾನ ಸಿಗುತ್ತದೆ ಎಂದು ಚಿತ್ರನಟ ಮಿಸ್ಟರ್ ಸೌತ್ ಇಂಡಿಯಾ 2016ರ ರಾವಿ ಅಭಿಪ್ರಾಯ ವ್ಯಕ್ತ ಪಡಿಸಿದರು.ಜಾಲಹಳ್ಳಿಯ ಸೇಂಟ್ ಕ್ಲಾರೆಟ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಅಂತರ ಕಾಲೇಜ್ ಸಾಂಸ್ಕೃತಿಕ ಮಯೂರಿಕಾ–2017 ಹಬ್ಬದಲ್ಲಿ ವಿಶೇಷ ಅತಿಥಿಯಾಗಿ ಮಾತನಾಡಿದ ಅವರು ಕಾಲೇಜು ಜೀವನದಲ್ಲಿ ಸಿಗುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.ತಮ್ಮ ಜೀವನದಲ್ಲಿ ಪ್ರತಿಭಾ ಶಕ್ತಿ ಸವಾಲುಗಳು, ತಿರುವಳಿಕೆಗಳನ್ನು ಕಲಿಸಿದವು ಎಂದರು. ಕಾರ್ಯಕ್ರಮದಲ್ಲಿ ಸಿನಿಮಾ ಮಂದಿಯ ಹೆಚ್ಚಾಗಿದ್ದು ವಿಶೇಷವಾಗಿತ್ತು, ಆಪರೇಷನ್ ಅಲಮೇಲಮ್ಮ ಚಿತ್ರದ ಟೀಸರ್ ಪ್ರದರ್ಶನ ನಡೆಯಿತು,ವಿವಿಧ ಕಾಲೇಜು ವಿದ್ಯಾರ್ಥಿಗಳ ಕಲಾ ಪ್ರದರ್ಶನ ಸಂಗೀತ ಲಹರಿ ಮನಸೆಳೆದವು. ವಿದ್ಯಾರ್ಥಿಗಳ ಸಾಂಸ್ಕೃತಿಕ ಹಬ್ಬ ಕಾಲೇಜು ಆವರಣವನ್ನು ಒಂದು ಪುಟ್ಟ ಭಾರತದಂತೆ ಮಾರ್ಪಡಿಸಿತ್ತು, ಆತಿಥೇಯ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ನಾಟ್ಯ,ಸಂಸ್ಕೃತಿ, ಹಾವಭಾವ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಹೊರಹಾಕಿತು.

ಪ್ರಾಂಶುಪಾಲ ಡಾ. ಸಾಬೂ ಜಾರ್ಜ್ ಅಧ್ಯಕ್ಷತೆ ವಹಿಸಿದ್ದರು. ಆಡಳಿತ ವಿಭಾಗದ ಮುಖ್ಯಸ್ಥ ಫಾದರ್ ಬೆನ್ನಿ ಥಾಮಸ್, ಫಾದರ್ ಜೋಸೆಫ್ ಉಪ ಪ್ರಾಂಶುಪಾಲ ರೆ. ವಿನಿತ್ ಜಾರ್ಜ್,ಕಾರ್ಯಕ್ರಮ ಸಂಯೋಜಕ ವಾಸು, ಸೊಮಾಂಜಲಿ ಮಹಾಪಾತ್ರ,ಚಿತ್ರನಟ ಋಷಿ ತೇಜಸ್ವಿ, ಚಿತ್ರ ನಿರ್ದೇಶಕ ಸಿಂಪಲ್ ಸುನಿ ಮುಂತಾದವರು ಉಪಸ್ಥಿತರಿದ್ದರು.





## ವೇದಮೂರ್ತಿ ಪತ್ರಿಕೆಯ ಜಾಹೀರಾತು ದರ

| | | |
|---|---|---|
| ಪೂರ್ಣ ಪುಟ: (ಕೊನೆ ಪುಟ) | : | 10,000.00/– |
| ಅರ್ಧಪುಟ (ಕೊನೆ ಪುಟ) | : | 5,000.00/– |
| ಕಾಲುಪುಟ (ಕೊನೆ ಪುಟ) | : | 2,500.00/– |
| ಪೂರ್ಣ ಪುಟ (ಒಳಗಡೆ) | : | 5,000.00/– |
| ಅರ್ಧಪುಟ (ಒಳಗಡೆ) | : | 2,500.00/– |
| ಕಾಲುಪುಟ (ಒಳಗಡೆ) | : | 1,000.00/– |
| ಶುಭಾಶಯ | : | 500.00/– |